## ಕತೆಯ ಮುಂಭಾಗ:

ನಾಯಕರು ಜೀವ ಹಿಂಡುತ್ತಿದ್ದ ತಮ್ಮ ಮಂಡಿಯ ನೋವಿಗೆ ಮಾತ್ರೆ ತೆಗೆದುಕೊಳ್ಳುತ್ತಿದ್ದಾಗ ಮುಖ್ಯ ರಸ್ತೆಯ ತುದಿಯಲ್ಲಿ ಘೋಷಣೆಗಳ ಸದ್ದು ಕೇಳಿಸಿತು. ನಾಯಕರಿಗೆ ಮೆರವಣಿಗೆ ಗದ್ದಲ ಜೈಕಾರಗಳ ಕುರಿತು ಈ ವಯಸ್ಸಿನಲ್ಲಿಯೂ ತೀರದ ಸೆಳೆತ. ಹಾಗಾಗಿ ಮನಸ್ಸು ಅದರೆಡೆಗೆ ತವಕಿಸತೊಡಗಿತು. ದಿನಸಿಯನ್ನೂ ಮಾತ್ರೆಗಳನ್ನೂ ತೆಗೆದುಕೊಂಡಿದ್ದಾಗಿದೆ. ಮನೆಗೆ ಹೋದರೆ ಹೊತ್ತು ಕಳೆಯುವುದು ಕಷ್ಟ. ಇದನ್ನಾದರೂ ನೋಡಿದರಾಯಿತು ಎಂದು ಯೋಚಿಸಿ ಮೆರವಣಿಗೆಯ ದಿಕ್ಕಿನೆಡೆಗೆ ಕುಂಟುತ್ತ ಹೊರಟರು.

ಅವರ ನಿರೀಕ್ಷೆ ಸುಳ್ಳಾಗಲಿಲ್ಲ. ಕೆಂಪು ಹಳದಿ ಬಣ್ಣದ ಬಾವುಟ ಹಿಡಿದುಕೊಂಡು ಒಂದಷ್ಟು ಜನ ಇತ್ತ ಕಡೆ ಬರುತ್ತಿದ್ದರು. ಬಾವುಟ ಘೋಷಣೆ ಇವೆಲ್ಲ ನಾಯಕರಿಗೆ ಹೊಸದಲ್ಲ. ಆದರೆ ಇಂತಹ ಚಟುವಟಿಕೆಗಳಿಂದ ದೂರವುಳಿದು ತುಂಬ ವರ್ಷಗಳಾಗಿದ್ದರಿಂದ ಇತ್ತೀಚೆಗೆ ಏನಾದರೂ ಬದಲಾವಣೆ ಆಗಿದೆಯಾ ಎನ್ನುವ ಕುತೂಹಲವಿತ್ತು. ಗೋಕಾಕ್ ಚಳವಳಿಯ ಕಾಲದಲ್ಲಿ ಪೊಲೀಸರ ಎದುರು ಎದೆ ಸೆಟೆಸಿ ನಿಲ್ಲುತ್ತಿದ್ದ ನಾಯಕರನ್ನು ಮೆಚ್ಚಿಕೊಂಡ ರಾಜಣ್ಣ




ಚಿತ್ರಗಳು: ವೆಂಕಟ್ರಮಣ ಭಟ್